ಕರ್ನಾಟಕ ಸರ್ಕಾರ
**Government of Karnataka**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡ ರಸ್ತೆ
ಮಲ್ಲೇಶ್ವರಂ, ಬೆಂಗಳೂರು – 03
Aranya Bhavan, 18th Cross,
Malleshwaram, Bengaluru – 03
Tele: 080 23343770
Email: pccfrecruitment@gmail.com

**No.** KFD/HOFF/B9(RCT)/5/2026-PnR

**E-2167379**
Dated: 29.09.2026

**ಇವರಿಗೆ,**

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ
ಬೆಂಗಳೂರು/ ಬಳ್ಳಾರಿ/ ಬೆಳಗಾವಿ/ ಚಾಮರಾಜನಗರ/
ಚಿಕ್ಕಮಗಳೂರು/ ಧಾರವಾಡ/ ಹಾಸನ/ ಕೆನರಾ/ ಕೊಡಗು/
ಕಲಬುರಗಿ/ ಮಂಗಳೂರು/ ಮೈಸೂರು/ ಶಿವಮೊಗ್ಗ ವೃತ್ತ.

**ವಿಷಯ:** ಕರ್ನಾಟಕ ಅರಣ್ಯ ಇಲಾಖೆಯಲ್ಲಿನ ವಿವಿಧ ವೃತ್ತಗಳ ಹಂತದಲ್ಲಿ ಖಾಲಿ ಇರುವ 750 (ಉಳಿಕೆ ಮೂಲ ವೃಂದ 700 ಮತ್ತು ಕಲ್ಯಾಣ ಕರ್ನಾಟಕ 50) ಅರಣ್ಯ ವೀಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ ಕುರಿತು.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಎಫ್‌ಇಇ 145 ಎಫ್‌ಎನ್‌ಜಿ 2024(ಇ), ದಿನಾಂಕ: 11.05.2026 *[750 (ಉಳಿಕೆ ಮೂಲ ವೃಂದ 700 ಮತ್ತು ಕಲ್ಯಾಣ ಕರ್ನಾಟಕ 50) ಅರಣ್ಯ ವೀಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಸರ್ಕಾರದ ಸಹಮತಿ]*
2. ಸರ್ಕಾರದ ಅಧಿಸೂಚನೆ ಸಂಖ್ಯೆ: FEE 203 FEG 2015 ದಿನಾಂಕ: 06.08.2019 [Karnataka Forest Department Services (Recruitment) (Amendment) Rules 2019 *[ವೃಂದ ಮತ್ತು ನೇಮಕಾತಿ ನಿಯಮಗಳು]*
3. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ:30.06.2026 ಮತ್ತು 04.07.2026.
4. ಸನ್ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 04.09.2026ರಂದು ನಡೆದ ಸಭೆಯ ನಿರ್ದೇಶನ.
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 242 ಎಫ್‌ಎನ್‌ಜಿ 2026, ದಿನಾಂಕ: 23.09.2026 *[ST-LFDT ಉಪ ಜಾತಿಗಳ ಸೇರ್ಪಡೆ ಕರಡು].*

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿನ ಅನುಮೋದನೆಯಂತೆ, ಉಲ್ಲೇಖ (2)ರ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಷೆಡ್ಯೂಲ್-IIರ ಕ್ರಮ ಸಂಖ್ಯೆ: 53ರಲ್ಲಿರುವ ಅರಣ್ಯ ವೀಕ್ಷಕ ವೃಂದಕ್ಕೆ ಸಂಬಂಧಿಸಿದಂತೆ, ವೃತ್ತವಾರು ನೇರ ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸಿ ದಿನಾಂಕ: **01.08.2026**ರಿಂದ **31.08.2026**ರವರೆಗೆ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸ್ವೀಕರಿಸಲು ದಿನಾಂಕವನ್ನು ನಿಗದಿಪಡಿಸಲಾಗಿರುತ್ತದೆ. ಈ ಮಧ್ಯೆ ತಾಂತ್ರಿಕ ಕಾರಣಗಳ ಹಿನ್ನಲೆಯಲ್ಲಿ ದಿನಾಂಕ: **01.09.2026**ರಿಂದ **07.09.2026**ರವರೆಗೆ ಮತ್ತು ಉಲ್ಲೇಖ (4)ರಲ್ಲಿ ಸನ್ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: **04.09.2026**ರಂದು ಪ್ರಧಾನ ಕಚೇರಿ ಅರಣ್ಯ ಭವನ, ಬೆಂಗಳೂರು ಇಲ್ಲಿ ನಡೆದ ಸಭೆಯಲ್ಲಿ ಅರಣ್ಯ ವೀಕ್ಷಕ ನೇರ ನೇಮಕಾತಿ ಅಧಿಸೂಚನೆಗೆ ಸಂಬಂಧಿಸಿದಂತೆ, ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿರುವ ಅಂತಿಮ ಅವಧಿಯನ್ನು ದಿನಾಂಕ: **30.09.2026**ರವರೆಗೆ ವಿಸ್ತರಿಸುವಂತೆ ನಿರ್ದೇಶನವನ್ನು ನೀಡಿರುತ್ತಾರೆ. ಅದರಂತೆ, ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಪ್ರಕ್ರಿಯೆಯಲ್ಲಿ ದಿನಾಂಕವನ್ನು ವಿಸ್ತರಿಸಲಾಗಿರುತ್ತದೆ.

Apccf
publicity
ICT

ಮುಂದುವರೆದು, ಉಲ್ಲೇಖ (5)ರ ಸರ್ಕಾರದ ಅಧಿಸೂಚನೆಯಲ್ಲಿ ಪರಿಶಿಷ್ಟ ಪಂಗಡ-ಸ್ಥಳೀಯ ಅರಣ್ಯ ಬುಡಕಟ್ಟು ಜನಾಂಗದ ಮೀಸಲಾತಿಯಡಿಯಲ್ಲಿ ಕೆಲವು ಪರಿಶಿಷ್ಟ ಪಂಗಡದ ಉಪ ಜಾತಿಗಳನ್ನು ಸೇರ್ಪಡೆಗೊಳಿಸಲು ಗಸ್ತು ಅರಣ್ಯ ಪಾಲಕ ಮತ್ತು ಅರಣ್ಯ ವೀಕ್ಷಕ ವೃಂದದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಕರಡು ಅಧಿಸೂಚನೆಯನ್ನು ಪ್ರಕಟಿಸಿ ಈ ಸಂಬಂಧ ಯಾವುದಾದರೂ ಆಕ್ಷೇಪಣೆ ಅಥವಾ ಸಲಹೆಗಳನ್ನು ಆಹ್ವಾನಿಸಿ ಅಧಿಕೃತವಾಗಿ ಕರ್ನಾಟಕ ರಾಜ್ಯ ಪತ್ರ (ವಿಶೇಷ ರಾಜ್ಯ ಪತ್ರ)ದಲ್ಲಿ ಪ್ರಕಟಿಸಲಾಗಿರುತ್ತದೆ **[ಪ್ರತಿ ಲಗತ್ತಿಸಿದೆ]**.

**ಈ ಹಿನ್ನಲೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸ್ವೀಕರಿಸಲು ಅವಧಿಯನ್ನು ದಿನಾಂಕ: 30.10.2026ರವರೆಗೆ ಮತ್ತೊಮ್ಮೆ ವಿಸ್ತರಿಸಿದೆ. ಈ ಸಂಬಂಧ ಆಯ್ಕೆ ಪ್ರಾಧಿಕಾರಗಳು**

**ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಣೆಯನ್ನು ಅರಣ್ಯ ಇಲಾಖೆಯ ಅಧಿಕೃತ ಜಾಲತಾಣದಲ್ಲಿ ಅತಿ ಜರೂರಾಗಿ-ಇಂದೇ ಪ್ರಕಟಪಡಿಸಲು ಹಾಗೂ ಕೈಗೊಂಡ ಕ್ರಮದ ವರದಿಯನ್ನು ಈ ಕಚೇರಿಗೆ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ.**

Digitally signed by
MEENAKSHI NEGI
Date: 29-09-2026
15:12:09

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

**ಪ್ರತಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಆಪ್ತ ಸಹಾಯಕರು, ಸನ್ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು, ಕರ್ನಾಟಕ ಸರ್ಕಾರ ರವರ ಗಮನಕ್ಕೆ ಸದರಿ ಮಾಹಿತಿಯನ್ನು ತರಲು ಕೋರಿದೆ.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಚಾರ ಮತ್ತು ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸುತ್ತಾ, ವೃತ್ತಗಳಿಂದ ಸ್ವೀಕೃತವಾಗುವ ವಿಸ್ತರಿಸಿದ ಪ್ರಕಟಣೆಗಳನ್ನು ಅರಣ್ಯ ಇಲಾಖೆಯ ಅಧಿಕೃತ ಜಾಲತಾಣದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲು ಜರೂರು ಕ್ರಮ ವಹಿಸುವುದು.